# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ)** **ಮೈಸೂರು**

ಸಂಪುಟ 1 ಸಂಚಿಕೆ 11 Volume 1 Issue 11
Email: mahilavishesha@yahoo.com
web:www.mahilavishesha.in

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793

ಮಂಗಳವಾರ 10-11-2015

ಮೈಸೂರು
ಪುಟ 2
ಬೆಲೆ ₹ 2


## ಸಚಿವ ಉಮಾಶ್ರೀಗೆ ಬಡ್ತಿ




ಕನ್ನಡ ಮತ್ತು ಸಂಸ್ಕೃತಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವೆ ಆಗಿರುವ ಉಮಾಶ್ರೀರವರನ್ನು ಸಂಪುಟ ದರ್ಜೆಗೆ ಬಡ್ತಿ ನೀಡುವಂತೆ ಮುಖ್ಯಮಂತ್ರಿಗಳು ಮಾಡಿದ್ದ ಶಿಫಾರಸ್ಸಿಗೆ ರಾಜ್ಯಪಾಲರು ಅನುಮೋದನೆ ನೀಡಿದ್ದಾರೆ.

## ಎಸ್‌ಎಸ್‌ಸಿ ಪರೀಕ್ಷೆ

ಸ್ಟಾಫ್ ಸೆಲೆಕ್ಷನ್ ಕಮೀಷನ್ (SSC) ಕಂಬೈನ್ಡ್ ಹೈಯ್ಯರ್ ಸೆಕೆಂಡರಿ ಹಂತದ 2015ನೇ ಸಾಲಿನ ಪರೀಕ್ಷೆಗಳು ನವೆಂಬರ್ 15 ಹಾಗೂ 20 ರಂದು ಎರಡು ದಿವಸ ನಡೆಯಲಿವೆ. ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ವೆಬ್‌ಸೈಟ್ www. ssckkar. kar.nic.in ನಲ್ಲಿ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಎಂದು ಎಸ್‌ಎಸ್‌ಸಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

## ಆರು ತಿಂಗಳಲ್ಲಿ ನೇಮಕಾತಿ!

ಕೇಂದ್ರ ಸರ್ಕಾರವು ನೇಮಕಾತಿ ಪ್ರಕ್ರಿಯೆ ವಿಳಂಬ ತಡೆಯುವ ನಿಟ್ಟಿನಲ್ಲಿ ಖಾಲಿ ಹುದ್ದೆಗಳನ್ನು ನೇಮಕಾತಿ ಮಾಡಲು ಹೊಸ ನಿಯಮವನ್ನು ರೂಪಿಸಲು ಮುಂದಾಗಿದ್ದು ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ನಂತರ ಆರು ತಿಂಗಳೊಳಗಾಗಿ ನೇರ ನೇಮಕಾತಿ ಮಾಡಿಕೊಳ್ಳ ಬೇಕಾಗುತ್ತದೆ ಎಂಬ ಮಾಹಿತಿಗಳು ಲಭ್ಯವಿದ್ದು ಶೀಘ್ರದಲ್ಲೇ ಹೊಸ ನಿಯಮಗಳೇನು ಎಂಬುದನ್ನು ಕಾದು ನೋಡೋಣ

## ಕೇಂದ್ರ ಸೇವೆಗೆ ವಂದನಾ



ಐಎಎಸ್ ಅಧಿಕಾರಿ 1991ರ ಬ್ಯಾಚ್ ಮಿಸ್ ವಂದನಾ ಗುರ್‌ನಾನಿ ಹಾಲಿ ಕರ್ನಾಟಕ ಭವನ ದೆಹಲಿ ಕಛೇರಿಯ ಕಮೀಷನರ್‌ರಾಗಿದ್ದವರನ್ನು ಕೇಂದ್ರ ಸರ್ಕಾರ ಆರೋಗ್ಯ ಮತ್ತು ಕುಟುಂಬ ಇಲಾಖೆಯ ಜಂಟಿ ಕಾರ್ಯದರ್ಶಿಗಳಾಗಿ ವರ್ಗಾ ಯಿಸಿರುವುದ ರಿಂದ ಶೀಘ್ರದಲ್ಲೇ ಹೊಸ ಕಾರ್ಯಭಾರವನ್ನು ವಹಿಸಿಕೊಳ್ಳಲಿದ್ದಾರೆ.

## "ಶುಭಾರಂಭ"ದ ಸಹಕಾರಕ್ಕೆ ಧನ್ಯವಾದ ತಿಳಿಸಿದ ಡಿ.ಸಿ.



ರಾಜ್ಯದಲ್ಲೇ ಮೊದಲ ಬಾರಿಗೆ ಜಿಲ್ಲಾಡಳಿತವತಿಯಿಂದ ಶುಭರಂಭ ಸರಳ ಮತ್ತು ಸಾಮೂಹಿಕ ವಿವಾಹ ಕಾರ್ಯಕ್ರಮ ನಂಜನಗೂಡಿನಲ್ಲಿ 116 ಜೊತೆ ವಧುವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು

ಶುಭಾರಂಭ ನಿರೀಕ್ಷೆಗೆ ಮೀರಿ ಯಶಸ್ವಿಯಾಗಲು ಕಾರಣರಾದ ಆರ್‌ಬಿಐ, ಕಾರ್ಪೋರೇಷನ್ ಬ್ಯಾಂಕ್, ಛೇಂಬರ್ ಆಫ್ ಕಾಮರ್ಸ್, ದಾನಿಗಳು, ಖಾಸಗಿ ಬ್ಯಾಂಕುಗಳು / ಆಸ್ಪತ್ರೆಗಳು ಹಾಗೂ ಅಧಿಕಾರಿಗಳಿಗೆ ಮೈಸೂರು ಜಿಲ್ಲಾಧಿಕಾರಿ ಸಿ. ಶಿಖಾ ಧನ್ಯವಾದ ಸಮರ್ಪಿಸಿದರು.

ಎರಡನೇ ಶುಭಾರಂಭ ಕಾರ್ಯಕ್ರಮ ಚಾಮುಂಡಿಬೆಟ್ಟದಲ್ಲಿ ಫೆಬ್ರವರಿ 2016ರ ಮಾಹೆಯಲ್ಲಿ ನಡೆಸಲು ಯೋಜನೆ ಸಿದ್ಧಗೊಳ್ಳಲಾಗುತ್ತಿದೆಯೆಂದು ಈ ಸಂದರ್ಭದಲ್ಲಿ ಪ್ರಕಟಿಸಿದೆ. ನಿಜಕ್ಕೂ ಇದೊಂದು ಅರ್ಥಪೂರ್ಣ ಹಾಗೂ ಬಡವರ ಪಾಲಿಗೆ ನಂದಾದೀಪ ಎಂಬುವುದರಲ್ಲಿ ಎರಡು ಮಾತಿಲ್ಲ.

## ಸದ್ಯದಲ್ಲೇ ಮಹಿಳಾ ಬ್ರಿಗೇಡ್

ಕೇಂದ್ರ ಸರ್ಕಾರ ಮಹಿಳೆಯರ ಮೇಲೆ ನಡೆಯುತ್ತಲಿರುವ ಕೌಟುಂಬಿಕ ದೌರ್ಜನ್ಯ ತಡೆಗೆ ಮಹಿಳಾ ಬ್ರಿಗೇಡ್ ರಚಿಸಲು ನಿರ್ಧರಿಸಿದೆ. 15 ರಾಜ್ಯಗಳಲ್ಲಿ ಪ್ರಾಯೋಗಿಕವಾಗಿ ಡಿಸೆಂಬರ್ ಮಾಹೆಯಿಂದ ಆರಂಭವಾಗಲಿದೆ.

## ಮಹಿಳೆಯರಿಗೆ ಮೀಸಲಾತಿ ಜೊತೆ ರಕ್ಷಣೆಯಾಗಬೇಕು

ಉದ್ಯೋಗದಲ್ಲಿ ಮಹಿಳಾ ಮೀಸಲಾತಿ ಪ್ರಮಾಣ ಹೆಚ್ಚಿಸಿದ್ದು ಸಂತೋಷ ಹಾಗೂ ಹೊಸ ಆಶಾಭಾವನೆ ಮಹಿಳೆಯರಲ್ಲಿ ಮೂಡಿದೆ. ಈಗ ಕೆಲಸ ಮಾಡುತ್ತಿರುವ ಮಹಿಳೆಯರು ಹಲವಾರು ಸಮಸ್ಯೆಗಳಿಗೆ ಸಿಲುಕಿದ್ದು ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಪ್ರಾಮಾಣಿಕತೆಗೆ ಗೌರವವಿಲ್ಲ. ಏನೋ ಒಂದು ತರ ತಾತ್ಸಾರ ಮನೋಭಾವ, ಕೆಲಸದಲ್ಲಿ ಒತ್ತಡ ಇತ್ಯಾದಿಗಳ ಬಗ್ಗೆ ಸೂಕ್ತಕ್ರಮವೂ ಬೇಕು. ಹಾಗೆಯೇ ರಕ್ಷಣೆಯನ್ನು ನೀಡುವ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂಬುದೇ ಮಹಿಳಾ ನೌಕರರ ಹಾಗೂ ನಿರೋದ್ಯೋಗಿಗಳ ಅಭಿಲಾಷೆಯಾಗಿದೆ.

## ನಿರ್ಭಯಾ ನಿಧಿ ಸುರಕ್ಷಿತ

ಮಹಿಳೆಯರ ಸುರಕ್ಷತೆಗಾಗಿ ಆರಂಭವಾಗಿದ್ದ ನಿರ್ಭಯಾ ನಿಧಿಯಲ್ಲಿ ಸುಮಾರು ಮೂರು ಸಾವಿರ ಕೋಟಿ ರೂ ಜಮಾ ಆಗಿದ್ದರೂ ನಿರೀಕ್ಷೆಯಂತೆ ಖರ್ಚಾಗಿರುವುದಿಲ್ಲ. ಈ ನಿಧಿ ದೇಶದ ಮಹಿಳೆಯರಲ್ಲಿ ಹುಟ್ಟಿಸಿದ್ದ ಸುರಕ್ಷತೆ ಭರವಸೆ ಈಡೇರದೆ ಇರುವುದು ಬೇಸರದ ಸಂಗತಿ. ನಿಧಿಯಲ್ಲಿರುವ ಹಣವನ್ನು ಸದ್ಬಳಕೆ ಮಾಡಿ ಮಹಿಳೆಯರಿಗೆ ಸಹಾಯ ಮಾಡಿ, ಯಾವಾಗಲೋ ಮಾಡಿದರೆ ಪ್ರಯೋಜನವಿಲ್ಲ. ಪ್ರಥಮ ಹಂತದಲ್ಲಿಯೇ ರೂಪು ರೇಖೆಗಳನ್ನು ಸಿದ್ಧಪಡಿಸಿ ಉಪಯೋಗಿಸಿದರೆ ಮಹಿಳೆಯರಿಗೆ ರಕ್ಷಣೆ ಸಿಗುತ್ತದೆ. ಭಯಾ ಬೇಡ ನಿರ್ಭಯಾ ನಿಧಿ ಹಣವನ್ನು ಉಪಯೋಗಿಸಿ ಜನಾನುರಾಗಿಯಾಗಿ ಎಂಬುದೇ ಮಹಿಳೆಯರ ಆಶಯ.

## ಕನ್ನಡ ವಚನದ ಸಾರ ತಿಳಿಯುವ ಆಸೆ



ಪೊಲೀಸ ಮಹಿಳಾ IPS ಅಧಿಕಾರಿ ಸೋನಿಯಾ ನಾರಂಗ್ 2002ರ ಬ್ಯಾಚ್ IPS ರವರು ಹರಿಯಾಣ ಜಿಲ್ಲೆಯವ ರಾಗಿದ್ದು ಕನ್ನಡ ವನ್ನು ಪ್ರೀತಿಸುವವ ರಾಗಿದ್ದಾರೆ.

## ಕನ್ನಡವನ್ನು ಮರೆಯಲಾರೆ ಡಾ. ಶಾಲಿನೀ



IAS ಅಧಿಕಾರಿ 1989 ಬ್ಯಾಚ್ ಡಾ. ಶಾಲಿನಿ ರಜನೀಶ್‌ರವರು ಕರ್ನಾಟಕ ರಾಜ್ಯದಲ್ಲಿ ಕೆಲಸ ಮಾಡಿದ್ದು ಅವರ ತರಬೇತಿ ಸಮಯದಲ್ಲಿ ನಿರ್ದೇಶಕರಾದ ಸುದೀಪ್ ಕೃಷ್ಣರವರು ಕನ್ನಡ ಕಲಿಯಿರಿ . ಆಡಳಿತ ನಡೆಸಲು ಅನುಕೂಲವಾಗುತ್ತೆ ಎಂದು ತಿಳಿವಳಿಕೆ ನೀಡಿದ್ದರ ಪ್ರಯುಕ್ತ ಕನ್ನಡವನ್ನು ಕಲಿತು 5 ಪುಸ್ತಕಗಳನ್ನು ರಚಿಸಿರುತ್ತಾರೆ. ಕನ್ನಡ ಕಲಿಯುವಾಗ ಕನ್ನಡಿಗರು ಅಪಹಾಸ್ಯ ಮಾಡಲಿಲ್ಲ. ಕಲಿಯಲು ಪ್ರೋತ್ಸಾಹಿಸಿದರು. ಇದಕ್ಕಾಗಿ ಕನ್ನಡಿಗರಿಗೆ ಧನ್ಯವಾದಗಳು ಎಂದು ತಿಳಿಸಿದ್ದಾರೆ.

## ಕಲ್ಯಾಣಮ್ಮ ಕಂಡಂತೆ : ಜೀವನ - ಭಾವನ - ಪಾವನ - ಸಾಧನ



ಲಿಂಗೈಕ್ಯ ಎಂ.ಬಿ. ಸಿದ್ದಪ್ಪ ಎಂ.ಎ., ಹಾಗೂ ಶರಣೆ ಗಂಗಮ್ಮನವರ ಜ್ಯೇಷ್ಠ ಪುತ್ರಿಯೇ ಕಲ್ಯಾಣಮ್ಮ. ತೌವರು ಮನೆ ಶಿವಗಂಗಾ, ಹೊಳಲ್ಕೆರೆ ತಾಲ್ಲೂಕು. ಚಿತ್ರದುರ್ಗ ಜಿಲ್ಲೆ.

ತಂದೆಯು ಅಸಿಸ್ಟೆಂಟ್ ಕಮೀಷನರ್ ಹುದ್ದೆಯಲ್ಲಿದ್ದು ಕರ್ನಾಟಕ ಸರ್ಕಾರದಲ್ಲಿ ಸೇವೆ ಸಲ್ಲಿಸಿರುತ್ತಾರೆ. ವರ್ಗಾವಣೆಯಾದಗಲೆಲ್ಲಾ ಆಯಾಯಾ ಸ್ಥಳಕ್ಕೆ ಕೆಲಸದ ಮೇಲೆ ಹೋಗುತ್ತಿದ್ದು ಸಂಸಾರವನ್ನು ಬೆಂಗಳೂರಿನಲ್ಲಿ ಇರಿಸಿದ್ದರು. ಕಲ್ಯಾಣಮ್ಮನವರ ವಿದ್ಯಾಭ್ಯಾಸ ಭಾರತೀ ವಿದ್ಯಾನಿಕೇತನ ಶಾಲೆಯಲ್ಲಿ ನಡೆದಿದ್ದು 1960ನೇ ಇಸವಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಕಲ್ಯಾಣಮ್ಮನವರಿಗೆ ಮೊದಲಿನಿಂದಲೂ ಓದುವ ಹವ್ಯಾಸ ಅದರಲ್ಲೂ ಅಧ್ಯಾತ್ಮಿಕದ ಬಗ್ಗೆ ಹೆಚ್ಚು ಒಲವು ಹಾಗೂ ಆಸಕ್ತಿ ತಾಳಕಟ್ಟ, ಚಿತ್ರದುರ್ಗ ನಿವಾಸಿ ಹಾಗೂ ಸಿವಿಲ್ ಇಂಜಿನೀಯರ್ ಆದ ಚಂದ್ರಶೇಖರ್‌ರವರೊಡನೆ 1963ರಲ್ಲಿ ವಿವಾಹ ತಿಪಟೂರಿನಲ್ಲಿ ನಡೆಯಿತು. ಬೆಂಗಳೂರು ಹಾಗೂ ವಿವಿಧ ನಗರಗಳಲ್ಲಿ ಹೆಸರಾಂತ ಕಟ್ಟಡಗಳನ್ನು ನಿರ್ಮಿಸುವಲ್ಲಿ ಚಂದ್ರ ಶೇಖರ್‌ರವರ ಪಾತ್ರ ಬಹುಮುಖ್ಯವಾಗಿರುತ್ತದೆ. ಇವರಿಗೆ ಒಂದು ಹೆಣ್ಣು ಹಾಗೂ ಒಂದು ಗಂಡು ಮಕ್ಕಳಿರುತ್ತಾರೆ.

ಮಗಳು ಡಾ. ಅನಿತಾರವರು ಇಂಜಿನಿಯರ್ ಮಹಾಂತೇಶ್‌ರವರನ್ನು ವಿವಾಹವಾಗಿ ವೃತ್ತಿ ಯೊಂದಿಗೆ ಕಳೆದ 12 ವರ್ಷಗಳಿಂದ ಆಸ್ಟ್ರೇಲಿ ಯಾದಲ್ಲಿ ನೆಲೆಸಿರುತ್ತಾರೆ. ಮಗ ಬಸವಕಿರಣ್ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತಿರುತ್ತಾರೆ. ಆಯಾಯ ಕಾಲಕ್ಕೆ ತಕ್ಕಂತೆ ಜೀವನವನ್ನು ನಡೆಸುವಂತಹ ಬುದ್ಧಿ ಹಾಗೂ ಜಾಣ್ಮೆ ಅವರಲ್ಲಿದೆ. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ನೀಡಿದ್ದು ಕಾಲಹರಣ ಮಾಡುವ ಜಾಯಮಾನವಲ್ಲ. ಮಕ್ಕಳಿಗೆ ವಚನಗಳ ಬಗ್ಗೆ, ಕನ್ನಡದ ಸಾಹಿತ್ಯದ ಬಗ್ಗೆ ತಿಳುವಳಿಕೆಯನ್ನು ನೀಡಿರುತ್ತಾರೆ.

ಮೊದಲೇ ತಿಳಿಸಿದಂತೆ ಕಲ್ಯಾಣಮ್ಮನವರು ಓದುವ ಅಭ್ಯಾಸವುಳ್ಳವರಾಗಿರುವುದರಿಂದ ಅವರು ಓದಿದ, ಕೇಳಿದ, ನೋಡಿದ, ಅನುಭವಕ್ಕೆ ಬಂದ ಹೀಗೆ ಹಲವಾರು ರೂಪಗಳನ್ನಾಧರಿಸಿ ಹೊಸ ವರುಷ 2016ಕ್ಕೆ **''ಕಲ್ಯಾಣ ಕಲ್ಪತರು''** ಶೀರ್ಷಿಕೆಯೊಂದಿಗೆ ಒಂದು ವಚನ ಪುಸ್ತಕವನ್ನು ಮುದ್ರಿಸಿ ಜ್ಞಾನ ದಾಸೋಹ ಮಾಡಬೇಕೆಂಬ ಹಂಬಲದಿಂದ್ದಿದ್ದು ಕಳೆದ ಮೂರು ತಿಂಗಳಿಂದ ಪುಸ್ತಕವನ್ನು ಹೊರತರಲು ಶ್ರಮವಹಿಸುತ್ತಿದ್ದಾರೆ. ಈ ಪುಸ್ತಕವನ್ನು ಬರೆಯಲು ಸ್ಫೂರ್ತಿ ದೇವಿ ಪ್ರೇರಣೆ ಹಾಗೂ ಬಸವಶಕ್ತಿ ಎನ್ನುತ್ತಾರೆ. ಈ ವಯಸ್ಸಿನಲ್ಲೂ ಇವರು ಲವಲವಿಕೆಯಿಂದಲು ಚಟುವಟಿಕೆ ಯಿಂದಲೂ ಕೂಡಿದ್ದು ಸದಾಕಾಲ ಹಸ್ಮನುಖಿ ಯಾಗಿರುತ್ತಾರೆ.

ಕಲ್ಯಾಣ ಕಲ್ಪತರು ಪುಸ್ತಕದಲ್ಲಿ ಜೀವನ, ಭಾವನ, ಪಾವನ ಹಾಗೂ ಸಾಧನ ಎಂಬ ಮುಖ್ಯ ಶೀರ್ಷಿಕೆಗಳಲ್ಲಿ ಸುಮಾರು 400ಕ್ಕೂ ಹೆಚ್ಚು ವಚನಗಳಿದ್ದು ಆ ಪುಸ್ತಕವು ಸುಮಾರು 200 ಪುಟವುಳ್ಳದ್ದಾಗಿರುತ್ತದೆ. ಹೊಸ ವರುಷಕ್ಕೆ ಜನರಿಗೆ, ಆತ್ಮೀಯರಿಗೆ ಜ್ಞಾನದಾಸೋಹ ಉಣಿಸ ಬೇಕೆಂಬುದೇ ಈಗಿನ ಅವರ ಧ್ಯೇಯವಾಗಿದೆ. ಆ ಕಾರ್ಯವು ಸುಲಲಿತವಾಗಲಿ ಎಂದು ದೇವಿ, ಬಸವಲಿಂಗ, ಮೈಸೂರಿನ ಚಾಮುಂಡೇಶ್ವರಿ ದೇವಿಯು ಕಲ್ಯಾಣಮ್ಮನವರಿಗೆ ಆಯುರಾರೋಗ್ಯ ಐಶ್ವರ್ಯವನ್ನು ಕರುಣಿಸಲಿ ಎಂದು ಮವಿ ಬಳಗ ಪ್ರಾರ್ಥಿಸುತ್ತದೆ.

ಕಲ್ಯಾಣ ಕಲ್ಪತರು ಪುಸ್ತಕ ಹೊರಬಂದ ನಂತರ ಓದುಗರು, ಓದಿ ಅದರಲ್ಲಿ ತಿಳಿಸಿರುವ ಕೆಲವು ಅಂಶವನ್ನಾದರೂ ಅವರವರ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನವು ಸುಖಕರವಾಗು ವುದರಲ್ಲಿ ಎರಡೂ ಮಾತಿಲ್ಲ. - ನಿರೂಪಣೆ ಹೆಚ್‌ವಿಎಸ್

## ಸಾಗರೋತ್ತರದಲ್ಲಿ ಕನ್ನಡ



ಅಮೇರಿಕಾದ ಚಿಕಾಗೋ ನಗರದಲ್ಲಿ IIT ಯಲ್ಲಿ 5ನೇ ವರ್ಷದ ಕನ್ನಡ ರಾಜ್ಯೋತ್ಸವ ಆಚರಣೆಯ ವೇಳೆಯಲ್ಲಿ ರಸಪ್ರಶ್ನೆ, ರಾಜ್ಯದ ತಿಂಡಿ ತಿನಿಸುಗಳ ಬಗ್ಗೆ, ನೆನಪು ಕಾರ್ಯಕ್ರಮ, ಜ್ಞಾನದಾಹ ಹಾಗೂ ಹೆತ್ತವರನ್ನು ನೆನಪಿಸಿಕೊಂಡರು. ನೃತ್ಯ, ನಾಟಕ, ಹಾಡು ಪ್ರದರ್ಶನಗೊಂಡಿತು. ವಿದೇಶದಲ್ಲೂ ಕನ್ನಡ ರಾಜ್ಯೋತ್ಸವ ವಿಜೃಂಭಣೆಯಿಂದ ಮನಃ ಪೂರ್ವಕವಾಗಿ ಆಚರಿಸಲ್ಪಟ್ಟಿತು.


**ವೆಬ್‌ಸೈಟ್ ವಿಳಾಸ**
**www.mahilavishesha.in**
**Mob : 9379777793**

## ಬದುಕೇ ಹೀಗೆ !

"ಸಿಗದಿರುವುದನ್ನು ಹುಡುಕಬೇಡಿ,
ಸಿಗುವುದನ್ನು ಬಿಡಬೇಡಿ."

## ನಡೆ - ನುಡಿ

"ಮನುಷ್ಯರಿಗೆ ಮಾತಾಡುವುದು ಸುಲಭವಾಗಿ ಬರುತ್ತದೆ ಆದರೆ ಮೌನವಾಗಿರುವುದು ಅಭ್ಯಾಸ ಮಾಡಬೇಕು" -ಗಾಂಧೀಜಿ

## ಒಗಟು

"ಬಳ್ಳಾರಿ ಕೆಂಪಣ್ಣ ಚೂರಿ ಚಿಕ್ಕಣ್ಣನ ಕೈಗೆ ಸಿಕ್ಕಿ ಚೂರಾದಾಗ ಕಂಡ ಕಂಡವರೆಲ್ಲ ಕಣ್ಣೀರಣ್ಣ"

(ಉತ್ತರ ಕಳಿಸಿ)

## ಹೇಗಿರಬೇಕು?

" ರಹಸ್ಯವನ್ನು ಮುಚ್ಚಿಡು ಅದು ನಿನ್ನ ಗುಲಾಮ; ರಹಸ್ಯವನ್ನು ಬಾಯಿ ಬಿಡು ಅದು ನಿಮ್ಮ ಯಜಮಾನ ." - ವಿಲ್ ಹೆನ್ರಿ

## ವಿಚಿತ್ರವಾದರೂ ನಿಜ !

ಹವಾಮಾನ ತಜ್ಞರ ಭವಿಷ್ಯ ಸುಳ್ಳಾಗುವುದಿಲ್ಲ. ಸುಳ್ಳಾಗುವುದು ಹವಾಮಾನ ಮಾತ್ರ.

## ಸುಂಸುಂನೆ - ನಾನಿದೀನಿ

ಹೊಟೇಲ್ ಒಂದರ ಒಳಗೆ ಬಂದ ಮಾಲಾ ಕೇಳಿದಳು ಏನೇನಿದೆ? ದೋಸೆ, ಇಡ್ಲಿ, ವಡೆ, ಪೂರಿ, ಬಾತು, ಕಾಫಿ, ಟಿ ಎಲ್ಲಾ ಇದೆ. ಅಂದ ಸಪ್ಲೈಯರ್. ಮಾಲಾ ಮತ್ತೆ ಕೇಳಿದಳು ಬೇರೆ ಇನ್ನೇನಿದೆ? ನಾನಿದೀನಿ ಅಂತಾ ಅಡಿಗೆ ಭಟ್ಟ ಮೆಲ್ಲಗೆ ಅಂದ.

ಮಮತಾ, ಮೈಸೂರು

## ಸ್ವಲ್ಪ ನಗ್ತೀರಾ ಪ್ಲೀಸ್....?

### ಬನ್ನಿ ಜೊತೆಗೇ

**ಭಿಕ್ಷುಕ :** ಅಮ್ಮಾ ತಾಯಿ ಧರ್ಮಾ ನೀಡಿ ತಾಯಿ,

**ಮನೆಯಾತ :** ಮನೇಲಿ ಏನೂ ಇಲ್ಲ ಮುಂದೆ ಹೋಗಯ್ಯ.

**ಭಿಕ್ಷುಕ :** ಏನೂ ಇಲ್ಲದ ಮೇಲೆ ನೀವ್ಯಾಕೀದೀರಾ ಬನ್ನಿ ನನ್ನ ಜೊತೆಗೆ '

## ಒತ್ತಡವನ್ನು ಒದ್ದು ನಿಲ್ಲಿ

2. ಇಂದು ಮಾಡಬೇಕಾಗಿರುವ ಕೆಲಸ - ಕಾರ್ಯಗಳನ್ನು ನಾಳೆಗೆ ಮುಂದೂಡಬೇಡಿ. ಹಾಗೆ ಮುಂದೂಡಿದಾಗ ಮರುದಿನ ಕೆಲಸದ ಭಾರ ಜಾಸ್ತಿಯಾಗಿ ಮಾನಸಿಕ ಒತ್ತಡ ಉಂಟಾಗಬಹುದು. ಅಲ್ಲದೆ ಇನ್ನಾವುದೋ ಅನಿವಾರ್ಯ ಸಂದರ್ಭಗಳು ಎದುರಾಗಿ ಅಂದೂ ಕೆಲಸ- ಕಾರ್ಯಗಳು ಆಗದಿರಬಹುದು. ಆಗ ನಿಮ್ಮ ಒತ್ತಡ ಇನ್ನೂ ಜಾಸ್ತಿಯಾಗುತ್ತದೆ. .....ಮುಂದುವರಿಯುವುದು

## ಬ್ಯೂಟಿಷಿಯನ್ ತರಬೇತಿ

ಶ್ರೀ ಲಕ್ಷ್ಮಿ ಮಹಿಳಾ ತರಬೇತಿ ಸಂಸ್ಥೆ, ನಜರ್‌ಬಾದ್ ಮೈಸೂರು -19 ಇವರ ವತಿಯಿಂದ 15 ವರ್ಷ ಮೇಲ್ಪಟ್ಟ ಯುವತಿಯರಿಗೆ ಟೈಲರಿಂಗ್, ಫ್ಯಾಷನ್ ಡಿಸೈನಿಂಗ್, ಬ್ಯೂಟಿಷಿಯನ್ ಹಾಗೂ ಇಂಗ್ಲೀಷ್ ತರಬೇತಿ ನೀಡಲಾಗುವುದು.ಹೆಚ್ಚಿನ ಮಾಹಿತಿಗಾಗಿ ಮೊ: 96110 66634 ಅನ್ನು ಸಂಪರ್ಕಿಸಬಹುದು.



## ಪುಟಾಣಿ - ಬಟಾಣಿ



### ಮಾವಿನ ಮರದ ಸಾಕ್ಷಿ

ಆಗ ಬೀರಬಲ್ಲನು "ಅಭೇಸಿಂಹ ಸತ್ಯವನ್ನು ನುಡಿ. ನಿನ್ನ ತಪ್ಪನ್ನು ನೀನೇ ಒಪ್ಪಿಕೊಳ್ಳುಳ್ಳುತ್ತಿದ್ದೀಯಾ. ಬ್ರಾಹ್ಮಣನು ನಿನಗೆ ಹಣದ ಚೀಲವನ್ನು ಕೊಟ್ಟನೋ ಇಲ್ಲವೋ? ಈಗಲೂ ಸುಳ್ಳನ್ನು ಹೇಳಿದರೆ ಶಿಕ್ಷೆಗೆ ಗುರಿಯಾಗುತ್ತೀಯಾ ? "ಎಂದನು. ಆಗ ಆಸ್ಥಾನಿಕನು ನಡುಗುತ್ತಾ ತನ್ನ ತಪ್ಪನ್ನು ಒಪ್ಪಿಕೊಂಡು ಆ ಬ್ರಾಹ್ಮಣನಿಗೆ ಹಣದ ಚೀಲವನ್ನು ಹಿಂದಿರುಗಿಸಿದನು. ರಾಜನು ಬೀರಬಲ್ಲನ ಬುದ್ಧಿಗೆ ಮೆಚ್ಚಿದನು. ಅಂತೆಯೇ ಅಭೇಸಿಂಹನು ಮೋಸ ಮಾಡಿದುದರಿಂದ ಶಿಕ್ಷೆಯನ್ನು ವಿಧಿಸಿದ. - ಮಾಲಾ, ಬೆಂಗಳೂರು

## ಆರೋಗ್ಯವಂತ ಹೃದಯಕ್ಕಾಗಿ



**2. ಧೂಮಪಾನ ತೊರೆಯಿರಿ :** ವಿಜ್ಞಾನಿಗಳು ನಡೆಸಿದ ಸಂಶೋಧನೆಗಳಿಂದ ಧೂಮಪಾನ ಮಾಡುವ ವ್ಯಕ್ತಿಗಳಿಗೆ ಆಕಸ್ಮಿಕವಾಗಿ ಹೃದಯಘಾತವಾಗುವ ಸಾಧ್ಯತೆ ಸಾಮಾನ್ಯ ವ್ಯಕ್ತಿಗಳಿಗಿಂತ ದ್ವಿಗುಣವಾಗಿರುತ್ತದೆ. ಧೂಮಪಾನ ಬಿಟ್ಟು ಹತ್ತು ವರ್ಷಗಳೊಳಗೆ ಈ ಅಪಾಯ ಕಡಿಮೆಯಾಗಿರುತ್ತದೆ. ಹಾಗಾದರೆ ನೀವು ಈಗಿನಿಂದಲೇ ಧೂಮಪಾನ ಬಿಡಲು ಹೆಜ್ಜೆಯನ್ನೇಕೆ ಇಡಬಾರದು.

## ಅಚ್ಚಕನ್ನಡದ ಸ್ವಚ್ಛ ಕರ್ನಾಟಕ




ವಿ.ಕೆ. ನಾಟಕೋತ್ಸವದ ಗ್ರಾಂಡ್ ಫಿನಾಲೆ ಮುಕ್ತಾಯಗೊಂಡಿದ್ದು ಸಂಭ್ರಮ ಸಡಗರದಿಂದ 3 ದಿನ ನಡೆಯಿತು. ರಂಗ ಕಲಾವಿದರಲ್ಲಿ ಹುಮ್ಮಸ್ಸು ಎದ್ದು ಕಾಣುತ್ತಿತ್ತು. ಪ್ರಕಟಣೆಗೊಂಡ ಅಚ್ಚಕನ್ನಡ ಸ್ವಚ್ಛ ಕರ್ನಾಟಕ ನಾಟಕ ಕಲಾತ್ಮಕ ತಂಡದಿಂದ ಆಡಿದ್ದು ಪ್ರಥಮ ಬಹುಮಾನ ಪಡೆಯಿತು.

## ಬಣ್ಣ ಬಣ್ಣದ ವಿವಿಧ ಆಕಾರದ ಹಣತೆಗಳು



ಬೆಳಕಿನ ಹಬ್ಬಕ್ಕಾಗಿ ವಿವಿಧ ರೀತಿಯ ಹಣತೆಗಳು ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಸಿದ್ಧವಿರುವುದು.

## ಅಂತೆ ಕಂತೆ ನಿಮ್ಮದೇನಂತೆ



ಸಿಕ್ಸರ್ ಸರದಾರ ಭಾರತ ಕ್ರಿಕೆಟ್ ಟೀಂ ಆಟಗಾರ ಯುವರಾಜ್‌ಸಿಂಗ್ ಹುಟ್ಟುಹಬ್ಬ 12-12-2015ರಂದು ಮಾರನೇ ದಿವಸವೇ ಬಾಡಿಗಾರ್ಡ್ ಸಿನಿಮಾದಲ್ಲಿ ನಟಿಸಿರುವ ಹಡೆಲ್ ಕೀಚ್‌ರನ್ನು ಮದುವೆಯಾಗ್ತಾರಂತೆ ಅಂತೆ ಕಂತೆ ಸುದ್ದಿ ಹರಿದಾಡುತ್ತಿದೆ. ಕುತೂಹಲ ಹಾಗೂ ಕಾಯಿಸುವ ಬದಲೂ ನಿಖರ ಮಾಹಿತಿಯನ್ನು ಇಬ್ಬರಲ್ಲೊಬ್ಬರು ಅಥವಾ ಕುಟುಂಬದವರು ನೀಡಿದರೆ ಅವರ ಅಭಿಮಾನಿಗಳಿಗೆ ಖುಷಿಯಂತೆ. ಅಲ್ಲಿಗೆ ಅಂತೆ ಕಂತೆ ನಿಲ್ಲುತ್ತಂತೆ.



## ನಮ್ಮ ಮಕ್ಕಳು

ಆರ್. ವಿಶಾಲಾಕ್ಷಿ ಗುಂಡೂರಾವ್
ನಿವೃತ್ತ ಶಿಕ್ಷಕಿ, ಮೈಸೂರು

ಅದಕ್ಕಾಗಿ ನಾವು ಮಕ್ಕಳಿಗೆ ಒಳ್ಳೆಯ ಕತೆಗಳನ್ನು ಹೇಳಬೇಕು. ಒಳ್ಳೆಯ ಕತೆಗಳುಳ್ಳ ಸಿನಿಮಾಗಳನ್ನೇ ತೋರಿಸಬೇಕು. ಸಾಧ್ಯವಾದಷ್ಟೂ ಕ್ರೌರ್ಯ, ದುಷ್ಟರ ಕತೆಗಳನ್ನು, ಅಶ್ಲೀಲ ದೃಶ್ಯಗಳನ್ನು ಒಳಗೊಂಡ ವಿಚಾರಗಳಿಂದ ಮಕ್ಕಳನ್ನು ದೂರ ಮಾಡಬೇಕು. ಭಕ್ತ ಪ್ರಹ್ಲಾದ, ಧ್ರುವ, ಶ್ರೀ ರಾಮಾಯಣ, ಮಹಾಭಾರತದಲ್ಲಿ ಬರುವ ನೀತಿಯುತವಾದ ಸಂದರ್ಭಗಳನ್ನು ಮಕ್ಕಳಿಗೆ ತಿಳಿಹೇಳುತ್ತಿರಬೇಕು .

...... ಮುಂದುವರೆಯುವುದು.

## ಉದ್ಯೋಗಾವಕಾಶ

ಸರ್ಕಾರಿ ಹಾಗೂ ಸ್ವಾಯತ್ತ ಸಂಸ್ಥೆಗಳಲ್ಲಿ 1064 ಖಾಲಿ ಇರುವ ಶುಶ್ರೂಷಕರ ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷೆ ಪ್ರಾಧಿಕಾರದ ಮುಖಾಂತರ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿವೆ. ಈ ಸಾಲಿನಲ್ಲಿ ಬಿಎಸ್‌ಸ್ಸಿ ಶುಶ್ರೂಷಕ ಪದವಿ ಹಾಗೂ ಸಾಮಾನ್ಯ ಶುಶ್ರೂಷಕ ತರಬೇತಿ (GNM) ಡಿಪ್ಲಮೋ ಶಿಕ್ಷಣ ಪಡೆದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು ಅರ್ಜಿಸಲ್ಲಿಸಲು ಕೊನೆಯ ದಿನಾಂಕ 2-12-15

## ಕೆ. ಆರ್. ಪೂಜಾಗೆ ದ್ವಿತೀಯ ಸ್ಥಾನ

ಜಿಲ್ಲಾ ಮಟ್ಟದ ಕನ್ನಡ ಭಾಷೆಯ ಭಾಷಣ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಜನ್ಮ ದಿನಾಚರಣೆ ಪ್ರಯುಕ್ತ ಮೈಸೂರಿನ ಎನ್‌ಟಿಎಂಎಸ್ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಹುಣಸೂರಿನ ರೋಟರಿ ವಿದ್ಯಾಸಂಸ್ಥೆಯ 10ನೇ ತರಗತಿಯ ವಿದ್ಯಾರ್ಥಿನಿ ಕೆ. ಆರ್. ಪೂಜಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನವನ್ನು ಪಡೆದಿದ್ದು. ವಿದ್ಯಾಸಂಸ್ಥೆಯ ಆಡಳಿತ ಮಂಡಳಿ, ಶಿಕ್ಷಕ ವರ್ಗ, ಸ್ನೇಹಿತರು, ಬಂಧು ಬಳಗದವರು ಅಭಿನಂದನೆ ಸಲ್ಲಿಸಿದ್ದಾರೆ.

ಇ ಮೇಲ್ ವಿಳಾಸ
**www.mahilavishesha@yahoo.com**
**Mob : 9379777793**

ನಾಡಿನ ಜನತೆಗೆ ದೀಪಾವಳ ಹಬ್ಬದ ಶುಭಾಶಯಗಳು
**ಕೆ.ಆರ್. ಮೋಹನ್‌ಕುಮಾರ್**, ಅಧ್ಯಕ್ಷರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಜೆ.ಎಲ್.ಬಿ. ರಸ್ತೆ, ಮೈಸೂರು. ಮೊ: **8105209999**

ನಾಡಿನ ಜನತೆಗೆ ದೀಪಾವಳ ಹಬ್ಬದ ಶುಭಾಶಯಗಳು
**ಎಂ. ಶಿವಣ್ಣ**, ಕಾರ್ಪೊರೇಟರ್
26ನೇ ವಾರ್ಡ್, ಹೆಬ್ಬಾಳ್ ಮೈಸೂರು ಮಹಾನಗರಪಾಲಿಕೆ,
ಮೈಸೂರು ಮೊ : **9449841026**

ನಾಡಿನ ಜನತೆಗೆ ದೀಪಾವಳ ಹಬ್ಬದ ಶುಭಾಶಯಗಳು
**ಸಿ.ಪಿ. ತಮ್ಮಣ್ಣ**, ರಾಜಕೀಯ ಮುಖಂಡರು
ಜನಮನರಂಗ, ಸಿದ್ಧಾರ್ಥನಗರ, ಮೈಸೂರು.
ಮೊ : **9620752999**

ನಾಡಿನ ಜನತೆಗೆ ದೀಪಾವಳ ಹಬ್ಬದ ಶುಭಾಶಯಗಳು
ಕೆ.ಸಿ. ಆನಂದ್, ಮಾಲೀಕರು Ph: 0821-2426665
**ಹೋಟೆಲ್ ಮಹಾರಾಜ**
ಜೆ.ಎಲ್.ಬಿ. ರಸ್ತೆ, ಮೈಸೂರು. Mob: 9740094000
E-mail:maharaja_ahok@yahoo.co.in

ಜನಶ್ರೀ ಸೋಲಾರ್ ಬಳಸಿ ವಿದ್ಯುತ್ ಹಾಗೂ ಹಣ ಉಳಿಸಿ
ಮನೆಗೆ, ರೈತರಿಗೆ, ಆಫೀಸಿಗೆ ಉಪಯೋಗಿಸಬಹುದಾದಂತಹ
ಸೋಲಾರ್ ಉಪಕರಣಗಳಿಗೆ ಅವಶ್ಯಕತೆ ಇರುವವರು ಸಂಪರ್ಕಿಸಿ.
ಮೊ: **9379777793**

**Need your own website
at Rs. 2000/- onwards
interested contact
9379777793**

## ಆಹ್ವಾನ ನಮ್ಮದು ಬಹುಮಾನ ನಿಮ್ಮದು

ನಿಮಗೆ ಬಹುಮಾನ ಬೇಕೆ ? ಹಾಗಾದರೆ www.mahilavishesha.in ಇಂಟರ್‌ನೆಟ್‌ನಲ್ಲಿ ಟೂಲ್‌ಬಾರ್‌ನಲ್ಲಿ ವೆಬ್‌ಸೈಟ್ ಓಪನ್ ಮಾಡಿ ಪತ್ರಿಕೆ ಓದಿ ನಿಮ್ಮ ಅನಿಸಿಕೆ ಒಂದೆರಡು ಸಾಲಿನಲ್ಲಿ ನಿಮ್ಮ ಹೆಸರು ಮೊಬೈಲ್ ಸಂಖ್ಯೆಯನ್ನು 16-11-2015 ರೊಳಗೆ ಇ - ಮೇಲ್ ಮಾಡಿ ನಿಮ್ಮ ಹೆಸರು ಲಕ್ಕಿಡಿಪ್‌ಗೆ ಸೇರ್ಪಡೆಯಾಗುತ್ತದೆ. ವಿವರಗಳಿಗೆ ಮುಂದಿನ ವಾರದ ಪತ್ರಿಕೆ ನೋಡಿ. - ಸಂಪಾದಕರು

## ದೀಪಾವಳಿ ಹಬ್ಬದ ಶುಭಾಶಯಗಳು - ನಾಗರೀಕರಲ್ಲಿ ಮನವಿ



ವಾರಪತ್ರಿಕೆಗಳ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗಾಗಿ ಧನ ಸಹಾಯ ಮಾಡುವವರು ಯಾವುದೇ ಅಂಚೆ ಕಛೇರಿಯಲ್ಲಿ ಉಳಿತಾಯ ಖಾತೆಗೆ ನಿಮ್ಮ ಕೈಲಾದಷ್ಟು ಹಣವನ್ನು ಜಮಾ ಮಾಡಬಹುದು. ಜಮಾವಾದ ಹಣಕ್ಕೆ ರಶೀತಿಯನ್ನು ಕಳುಹಿಸಿ ಕೊಡಲಾಗುವುದು. ಪತ್ರಿಕೆಯು ಈಗ ಆನ್‌ಲೈನ್‌ನಲ್ಲಿ ಲಭ್ಯವಿದೆ. ಓದಿ ಸಹಾಯ ಮಾಡಿ, ಬೇರೆಯವರಿಗೆ ಸಹಾಯ ಮಾಡಲು ತಿಳಿಸಿ.

| | | |
|---|---|---|
| ಅಂಚೆ ಕಛೇರಿ | : | ಯಾದವಗಿರಿ, ಮೈಸೂರು, ಕರ್ನಾಟಕ |
| ಖಾತೆದಾರರ ಹೆಸರು | : | ಹೆಚ್.ವಿ. ವೆಂಕಟಸುಬ್ಬರಾವ್<br>ಸಂಪಾದಕರು, ಮಹಿಳಾ ವಿಶೇಷ ಪತ್ರಿಕೆ |
| ಉಳಿತಾಯ ಖಾತೆಯ ಸಂಖ್ಯೆ | : | **3098204565** |

ನಾಡಿನ ಜನತೆಗೆ ಪತ್ರಿಕೆಯ ಓದುಗರಿಗೆ, ಜಾಹೀರಾತುದಾರರುಗಳಿಗೆ, ದೀಪಾವಳಿ ಹಬ್ಬದ ಶುಭಾಶಯಗಳು

**"ನಿಮ್ಮ ಸಹಕಾರ ಸಾವಿರಾರು ಜನರಿಗೆ ಉಪಕಾರ"**

## ದಿವ್ಯಾಗೆ ಪಿಹೆಚ್‌ಡಿ

ಅರ್ಥಶಾಸ್ತ್ರ ವಿಷಯದಲ್ಲಿ ಡಾ. ಆರ್. ವಿಶ್ವನಾಥ್ ಮಾರ್ಗದರ್ಶನದಲ್ಲಿ ಬಿ. ಎಸ್. ವಿದ್ಯಾ ಸಾದರ ಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಹೆಚ್‌ಡಿ ಪದವಿಗೆ ಅಂಗೀಕರಿಸಿದೆ.

Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Decl.No.: MAG.90/2015-16